# ಪಂಪನ ಪೂರ್ವಜರ ಜಾತಿ

೧. ಕನ್ನಡ ಆದಿಕವಿಯಾದ ಪಂಪನು ಸ್ವವಿಷಯವನ್ನು ಕ್ವಚಿತ್ತಾಗಿ ಹೇಳಿ ಕೊಂಡಿದ್ದಾನೆ. ಪಂಪನು ಪೂರ್ವಿಕರು ವೆಂಗಿಪಱುವಿನ ವತ್ಸ ಗೋತ್ರದ ಬ್ರಾಹಣರೆಂದು ಹೇಲಲಾಗಿದೆ. [ಪಂಪಭಾರತ,೧೪-೪೦ ರಿಂದ೪೩]. ‘ಸಕಲ ಶಾಸಾರ್ಥಗಳಲ್ಲಿ ಪಾಂಡಿತ್ಯವಿದ್ದ ಮಾಧವ ಸೋಮಯಾಜಿಯು ಸರ್ವಕ್ರತು ಎಂಬ ಯಜ್ಞವನ್ನು ಮಾಡಿದನು.:

ವರದಿಗ್ವನಿತೆಗೆ ಮಾಟದ
ಕುರುಳಾ ತ್ರಿಭುವನ ಕಾಂತಿಗಂ ದಲ್ ಕಂಠಾ
ಭರಣಮೆನೆ ಪರೆದ ತನ್ನ
ಧ್ವರ ಧೂಮದೆ ಕರಿದು ಮಾಡಿದಂ ನಿಜಯಶಮಂ ॥ .೧೪-೪೪

ಶ್ರೇಷವಾದ ದಿಕ್ಕೆಂಬ ಹೆಣ್ಣಿಗೆ ಅಲಂಕಾರವೆನಿಸಿ ಹಬ್ಬಿದ್ದ ಯಜದ ಹೊಗೆಯಿಂಥ ಸೋಮಯಾಜಿಯ ತನ್ನ ಯಶಸ್ಸನೂ ಕಪ್ಪಾಗಿಸಿದನ್ನು . ಆತನ ಮಗ ಅಭಿಮಾನಚಂದ್ರ ನು ಮಹಾದಾನಿಯಾಗಿದ್ದನ [೧೪-೪೫] ಅಭಿಮಾನಚಂದ್ರ ನಿಗೆ ಮಗನಾದ ಕೊಮರಯ್ಯನು ವೇದ ವೇದಾಂಗಗಳಿಂದ ಬೆಳಗಿದ ಬುದ್ಧಿ‘ಯುಳ್ಳವನಾಗಿದ್ದುದಲ್ಲದೆ ಪಾಚೀನ ಆಚಾರ ಸಂಪನ್ನ್ನಾಗಿದ್ದನು[೧೪-೪೬]. ಆ ಕೊಮರಯ್ಯನ ಮಗನೇ ಭೀಮಪಯ್ಯ್. ಗುಣಶಾಲಿಯೂ ಮಹಾಜಾ ನಿಯೂ ಆದ ಭೀಮಪಯ್ಯ್ನು ಬ್ರಾಹಾಣ ಜಾತಿಯನ್ನು ತೊರೆದು ಜೌನಧರ್ಮಕ್ಕೆ ಮತಾಂತರ ಮಾಡಿದನು.(ಉತ್ಪಲ ಮಾಲಾವೃತ್ತ)

ಜಾತಿಯೊಳೆಲ್ಲ ಮುತ್ತಮದ ಜಾತಿಯ ವಿಪ್ರ ಕುಲಂಗೆ ನಂಬಲೇ
ಮಾತೊ ಜಿನೇಂದ್ರ ಧರ್ಮಮೆವಲಂ ದೊರೆ ಧರ್ಮದೊಳೆಂದು ನಂಭಿ ತ
ಜ್ಜಾತಿಯನುತ್ತ ರೋತ್ತರಮೆ ಮಾಡಿ ನೆಗಱಿದನಿಂತಿರಾತ್ಮ ವಿ

ಖ್ಯಾತಿಯನಾತನಾತನ ಮಗಂ ನೆಗಱಿಕವಿತಾಗುಣಾರ್ಣವಂ ॥ ೧೪-೪೮

ಜಾತಿಯಲ್ಲೆಲ್ಲ ಉತ್ತಮಜಾತಿಯ ಬ್ರಾಹಣಕುಲಜನಿಗೆ ಧರ್ಮಗಳಲ್ಲೆಲ್ಲ ರಾಜಧರ್ಮವೇ ನಿಚ್ಛ್ಯಯವಾಗಿಯೂ ಯೋಗ್ಯಾವಾದದ್ದೆಂದು ನಂಬಿ ಭೀಮಪಯ್ಯನು ತನ್ನ ಬ್ರಾಹ್ಮಣಕುಲಜನಿಗೆ, ಧರ್ಮಗಳೆಲ್ಲೆಲ್ಲ ರಾಜಧರ್ಮವೇ ನಿಶ್ಚಯವಾಗಿಯೂ ಯೋಗ್ಯವಾದದ್ದಂದು ನಂಭಿ ಭೀಮಯ್ಯ್ಪನು ತನ್ನ ಬ್ರಾಹ್ಮಣ ಜಾತಿಯನ್ನು ಅಭಿವೃದ್ದಿ ಮಾಡಿ, ಜೈನಧರ್ಮವನ್ನು ಸ್ವೀಕರಿಸಿದನು. ಹೀಗೆ ಮತಾಂತರದಿಂದ ತ್ನ್ನ ಹೆಸರುನ್ನು ಹೆಚಿಸಿಕೊಂಡ ಭೀಮಪಯ್ಯನು ಮಗನೇ ಕವಿತಾ ಗುಣಾರ್ಣವನೆಂದು ಕೀರ್ತಿಶಾಲ್ಲಿಯಾದ ಪಂಪ.

೨. ಗಂಗಾಢ್ಢರಂ ಶಾಸನದಲ್ಲಿ ಇದೇ ವಿಷಯ ಇನ್ನಷು ನಿರುಕಾಗಿ ಬಂದಿದೆ. ವಂಗಿಪಱ ನಿಡುಗೊಣಯ- ಅಭಿಮಾನ ಚನ್ದನ ಮಮ್ಮ್ಂ ಭೀಮಪಯ್ಯನ ಬೆಳ್ವೊಲದ ಅಣ್ಣಿಗೆಜ್ಜಿಯ ಜೋಯಿಸ ಸಿಂಘನ ಮಮ್ಮ ೯೪- ಅಬ್ಬ ಣಬ್ಬೆಯ ಮಗಂ[ಐ.ಎ. ಪಿ. ಕರೀಂನಗರ .೩. ಸು.೯೫೦]

೩. ಮೇಲಿನ ಮಾಹಿತಿಗಳಿಂದ ತಿಳಿದು ಬರುವಂತೆ, ಪಂಪನ ಪೂರ್ವಿಕರು ಕಮ್ಮೆ ಬ್ರಾಹಣರು, ಜಮದಗಿ ಪಂಚಾರ್ಷೆಯರು ,ಶ್ರೀವತಗೋತ್ರಜರು. 'ಪ್ರಸುತ ಸಂಲೇಖನವದಲ್ಲಿ ಚರ್ಚಿಸಬೇಕೆಂದಿರುವುದು ಈ'ವತ್ಸಗೋತ್ರದವರು ಯಾರು ಮತ್ತು ಇವರು ಯಾವ ದ್ಯವೋಪಾಸಕರು ಎಂಬುದನ್ನು.

೩.೧. ಈ ವಾಗ್ವಾದಕ್ಕೆ ತಾರ್ಕಣ ಆಗುವಂತೆ, ಇನೂಂದು ಪೂರಕನೆಲೆಯ ಅಭಿಫ್ರಾಯವನ್ನು ಅನ್ಯತ್ರ ವ್ಯಕಪಡಿಸಿದೇನೆ: ಪಂಪನ ತಂದೆ ಭೀಮಪಯ್ಯನು ಜೈನನಾಗುವ ಮೊದಲು ಶ್ಯವ ಸ್ಮಾರ್ತನಾಗಿದ್ದನು. ಪಂಪನ ಮೂಲ ಹೆಸರು ಪಂಪಯ್ಯ್ ಎಂದಿದಿರಬಹುದು.ಪಂಪನ(ತಾಯಿ ಅಬ್ಬಣಬ್ಬೆ ಯ ತಂದೆ) ತಾತ ಜೋಯಿಸ ಸಿಂಘನೂ ವಾಜಿ ವಂಶಜನೇ ಇರಬೇಕು[ನಾಗರಾಜಯ್ಯ್ ,ಹಂಪ: ಶಾಸನಗಳಲ್ಲಿ ಎರಡು ವಂಶಗಳು: ೧೯೫-೨೯]

೩.೧.೧ ಪಂಪನ ಪೂರ್ವಜರು ಶ್ಯವ ಬ್ರಾಹ್ಮಣರೆಂದು ನಾನು ಹೀಗೆ ಅಭ್ಭೀಫ್ರಾಯವನ್ನು ವ್ಯಕಪಡಿಸುವಾಗ ಅದನ್ನುಸಮರ್ಥಸಬೇಕಾದ ಸಾಕ್ಷಾಧಾರಗಳನ್ನು ಒದಗಿಸಬೇಕಾದ ನ್ಯತಿಕ ಹೊಣಗಾರಿಗಯೂ ಇದೆಯೆಂಬ ಅರಿವಿದೆ.

೪.	ವೆಂಗಿವಿಷಯ (ವೆಂಗಿ ಮಂಡಲ) ದ ಹಾಗೂ ರೋಣ, ಗದಗ,ಲಕ್ಕುಂಡಿ,ಅಣ್ಣಿಗ್ಗೆರೆ ನೆರೆಹೊರೆಯಲ್ಲಿದ ಶಿವೋಪಾಸಕ ವಾಜಿ ಬ್ರಾಹ್ಮಣರಲ್ಲಿನ ಮುಖ್ಯ ಮನೆತನಗಳು ಬಹುವಾಗಿ ಜೈನರಾದರು. ನಾಗಮಯ್ಯುವು ಪುಂಗನೂರಿನಲ್ಲಿ ಜೈನನಾದನು. ಭೀಮಪಯ್ಯುನ ವೆಂಗಿಪಱುವಿನಲ್ಲಿ ಜೈನನಾದನು. ಜೋಯಿಸ ಸಿಂಘನು ಅಣ್ಣಗೆರೆಯಲ್ಲಿ ಜೈನನಾದನು. ರೋಣದ ಪಂಪಯ್ಯ್‌ನೂ [ಸೌ .ಇ.ಇ ೧೦–೧. ಕ್ರಿ.ಶ೪೨ಪು ೨೨] ಇವರ ಜ್ಞಾತಿಯಾಗಿದ್ದನು. ಕಾಶ್ಯಪ, ಕೌಂಡಿನ್ಯ, ಭಾರದ್ವಾರ, ಮಾಂಧಾತ , ವತ, ಸಾಂಖ್ಯಾಯನ ಮತ್ತು ಹಾರೀತ ಎಂಬ ಏಳುಗೋತ್ರಗಳು ವಾಜಿ ವಂಶದಲ್ಲಿದ್ದುವು [ನಾಗರಾಜಯ್ಯ್, ಹಂಪ: ಶಾಸನಗಾಳಲ್ಲಿ ಎರಡು ಕಡೆಯವರು, ವಾಜಿಕುಲದ ಶೈವ ಬ್ರಾಹ್ಮಣರು.ಮಹಾಕವಿ ಪಂಪ ಮತ್ತು. ಮಹಾದಾನಿ.ಅತ್ತಿಬ್ಬೆಯ ಪೂರ್ವಜರು ಒಂಬತ್ತನೆಯ ಶತಮಾನದಲ್ಲಿ ಬ್ರಾಹ್ಮಣ್ಯದಿಂದ ಜೈನತ್ವಕ್ಕೆ ಮತಾಂತರಗೊಂಡ ಪ್ರತಿಪಿತ ಮನೆತನಗಳು. ಇತ್ತ ಅಣ್ಣಿಗೆರೆರೋಣ,ಅತ್ತ ವೇಂಗಿವಿಷಯ, ಉತ್ತ ಭೋಧನ ಪರಿಸರ –ಇವು ರಟನಾಡಿಯ ಪರಿಧಿಯಲ್ಲಿದುವು.

೫.	ಪಂಪನು ಶೈವ ಬ್ರಾಹ್ಮಣ ಮೂಲದನಾದುದರಿಂದ, ವಿಕ್ರಮಾರ್ಜುನ ವಿಜಯ ದಲ್ಲಿ ಶಿವನನ್ನು ತನ ಯತೆಯಿಂದ ವರ್ಣಿಸಿವುದುಂಟು. ಇದಕ್ಕೆ ದೃಷಾಂತವಾಗಿ ,ದುರೋಧನನು ಭೀಷನನ್ನು ಕಾಣಲು ಬಂದಾಗಣ ಸಂದರ್ಭವನ್ನು ಪರಿಶೀಲಿಸ ಬಹುದು. ಭೀಷ್ಮನನ್ನು ಮೃತುಂಬ ಬಾಣಗಳು ನಟ್ಟದುವು. ಭೀಷನ ಮನಸು ಶಿವನಲ್ಲಿ ತೊಡಗಿಕೊಂಡಿತ್ತು: ಶರಶಯ್ಯಿಲ್ಲಿ ಮಲಗಿದ್ದನು, ಆದರೆ ಹರನನ್ನು ನೆನೆಯುತ್ತಿರುವ ಭೀಷನ ಈ ಚಿತ್ರ ಪಂಪನಿಗೇ ವಿಶಿಷವಾದ್ದು

ಇಡಿದಿರೆ ರೋಮಕೂಪದೊಳಗುರ್ಚಿದ ಸಾಲಸರ ಳಳ್ಗುಂ ತೆರಂ

ಬಿಡದಿರೆ ಬೆಟ್ಟುವೋರ್ಗುಡಿಸಿದಂತೆ ನೆರಲ್ದಿರೆ ಸುಯ್ಯ್ ಪುಣಳಿಂ

ಬಡನಡುವಂ ಶರಾಳಿ ಭಯದಿಂ ನಡುಪಂತಿರೆ ಚಿತ್ತದೊಳ ಮೃಡಂ

ತೊಡರ್ದಿರೆ ಬಳ್ದ'ದೇನೆಸೆದನೋಶರಶಯ್ಯ್ ಯೊಳಂದು ಸಿಂಧುಜಂ॥ ೧೩–೬೨

ಹರನೊಳೆ ಪತ್ತಿ ತ್ರತಿಸಿದ ಚಿತಮನೀರ್ಬಗೆಯಾಗಿ ವೋಹಮೊ

ತ್ವರಿಸೆ ಸುಯೋಧನಂಗೆ ರಣ ಭೂಮಿಯೊಳೆಂತುಟವಸೆಯೋ ಕನ

ಲ್ದುರಿದಪುದೆನ್ನ ಮ್ಯ ಯ್ಯ್ನತುಮತ್ತಣ ಪಂಬಲ ಬಂಬಲೊಳ ತಱಿಂ

ದಿರಿದುದು ಚಿತ್ರಮಾದೊರೆಯ ಯೋಗಿಗಮಿಂತುಟೆ ಮೋಹಮಾಗದೇ॥ ೧೩-೬೩

ಚಿತ್ರದೊಳ ಮೃಡಂ ತೊಡರ್ದಿರೆ, ಹರನೊಳಂ ಪತ್ತಿ ತೆತ್ತಿಸಿದ ಚಿತ್ರಮನ -ಎಂಬ ಮಾತುಗಳು ಪಂಪಕವಿಯ ಒಲವು ಯಾವ ದ್ರವದತ್ತ ಎಂಬುದನ್ನು ಬೋಟ್ಟು ಮಾಡಿ ತೋರಿಸುತ್ತವೆ.ಮೂಲ ವ್ಯಾಸಭಾರತದಲ್ಲಿ ಭೀಷ್ಮನು ಕೃಷ- ವಿಷ್ಣುಭಕನಾಗಿ ಚಿತ್ರ ಗೊಂಡಿದಾನೆ: ವಾಸುದೇವಾ, ಪಾಂಡವರನ್ನು ಕಾಪಾಡಿಕೋ, ಅವರಿಗೆ ನೀನೇ ಗತಿ. ನೀನು ಪುರಾತನ ಋಷಿಯಾದ ನಾರಾಯಣನ ಅವತಾರವೆಂದು ನನಗೆ ವ್ಯಾಸನೂ ನಾರದರೂ ಹೇಳಿದ್ದಾರೆ. ನನಗೆ 'ದೇಹ ಬಿಡಲು ಅಪ್ಪಣೆ ಕೊಡು. ನೀನು ಅನುಜೆ ಕೊಟ್ಟರೆ ನನಗೆ ಸದ್ಗತಿ ಲಭಿಸುತ್ತುದೆ.' ಎಂದನು. ಕೃಷ್ಣನು ಅನುಜ್ಞೆ ಕೊಟ್ಟನು [ಎ. ಆರ. ಕೃಷ್ಣ ಶಾಸ್ತ್ರೀ: ವಚನಭಾರತ: ಪು. ೩೫೮]

೧. ವ್ಯಾಸರು ಸಹ ಹೆಚಾಗಿ ಕೃಷ್ಣನ ಭಕ್ತರು. ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನ್ನು ಈಸಿದ, ಪಂಪನು ಹೆಚಾಗಿ ಶಿವಭಕ್ತನಾದದ್ದಕ್ಕೆ ಕಾರಣ ಆತನ ಪೂರ್ವಜರು ಶೃವ ಬ್ರಾಹ್ಮ ಣರಾಗಿದ್ದುದು.

೬.೧. ಪಂಪನ ಶಿಷ್ಯನಾದ ರನ್ನನು, ತ್ನ್ನ ಗುರುವಾದ ಪಂಪನನ್ನು ಅನುಸರಿಸದೆ, ವ್ಯಾಸರನ್ನು ಹಿಂಬಾಲಿಸಿದಾನೆಂಬುದು ಇಲ್ಲಿ ಗಮನಿಸಬೇಕಾದ ಮತ್ತೊಂದು ಸ್ವಾರಸ್ಯ .ಇದೇ ಪಸ್ತುತ ಪ್ರಸಂಗದಲ್ಲಿ, ಭೀಷನು ಮುಕುಂದ (ಕೃಷ್ಣ ) ನನ್ನು ಏಕಚಿತ್ರದಿಂದ ನೆನೆಯುತ್ತಿದ್ದನೆಂದಿದೆ:

ನರಶಕೋಟ ಜರ್ಜರಿಸೆ ತನ್ನ ಶರೀರಮನಸ್ತ್ರವೇದನಾ

ಪರವಶನಾಗಿಯುಂ ಮಱೆದನಿಲ್ಲ ಮುಂಕುದನನೇಕಚಿತ್ರದಿಂ

ಸ್ಮರಿಯಿಸುತಿರ್ದುಮತ್ತಲರಿ ಭೂಪರಿನೆಂತು ಟವಸಯಾದುದೋ

ಕುರುಪತಿಗೆಂದನಾ ಪರಮಯೋಗಿಗಮಿಂತುಟು ಮೋಹಮಾಗದೇ ॥ ೫-೩೮

ಈ ಪದ್ಯದ ನಡಿಗೆ ಭಾವ ಛಂದಸ್ಸು ಸಂದರ್ಭ ಎಲ್ಲವೂ ಪಂಪನ ಪ್ರತಿರೂಪವಾಗಿವೆ. ಆದರೆ ಈಪದ್ಯದಲ್ಲಿ ಆಗಿರುವ ಒಂದೇ ವ್ಯತ್ಯಾಸ ಹರನ ಬದಲು ಮುಕುಂದ ಬಂದಿರುವುದು.

೬.೧.೧. ಇದರಿಂದ ಎರಡು ಸಂಗತಿಗಳುಸಾಬೀತಾಗುತ್ತವೆ: ಪಂಪನು ಶೈವೋಪಾಸಕ ಪರಂಪರೆಯನ್ನು ಪ್ರತಿನಿಧಿಸುತ್ತಾನೆ, ಮತ್ತುಅ ರನ್ನನು ಕೇವಲ ಪಂಪನು ನೀಲಿ ನಕಾಶೆಯಲ್ಲ. ರನ್ನನು ತನ್ನದೇ ಆದ ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳಬಲ್ಲ.